## ಬೆಂಕಿಯ ಸ್ವರೂಪ-ಅಪಾಯ

ದೇಶದಲ್ಲಿ ಸಂಭವಿಸುವ ಅರಣ್ಯದ ಬೆಂಕಿಗಳು ಬಹುತೇಕ ನೆಲಮಟ್ಟದವು (surface fires). ಉದುರೆಲೆ ಕಾಡುಗಳಲ್ಲಿ ಈ ಸ್ವರೂಪದ ಬೆಂಕಿ ಸರ್ವೇಸಾಮಾನ್ಯ. ಸಮಶೀತೋಷ್ಣ ವಲಯದ ಕಾನನಗಳಲ್ಲಿ ಉಂಟಾಗುವ 'ಮುಕುಟ ಮಣಿ' ಬೆಂಕಿ (crown fires) ಕರ್ನಾಟಕದ ಕಾಡುಗಳಲ್ಲಿ ಕಂಡುಬರುವುದು ಅಪರೂಪ. ಈ ಮಾದರಿಯ ಕಾಳ್ಗಿಚ್ಚು ಮರದ ತುತ್ತತುದಿಯವರೆಗೂ ಹಬ್ಬುತ್ತದೆ. ನೆಲದಾಳದ (underground fires) ಮತ್ತು ನೆಲಮಟ್ಟದ ಕೆಳಗಿನ (ground fires) ಬೆಂಕಿ ಮಣ್ಣಿನ ಪದರಗಳಿಗೆ ಹಾನಿ ಮಾಡುತ್ತದೆ.

ನೆಲಮಟ್ಟದ ಬೆಂಕಿಗೆ ಗಿಡ–ಮರಗಳು ಭಾಗಶಃ ಸುಟ್ಟು ಹೋಗುತ್ತವೆ. ಅವುಗಳ ಬೆಳವಣಿಗೆ ಸಂಪೂರ್ಣ ಕುಂಠಿತವಾಗುತ್ತದೆ. ನಿಧಾನಗತಿಯಲ್ಲಿ ಹಬ್ಬುವ ಈ ಬೆಂಕಿಗೆ ಕಾಲಾಂತರದಿಂದ ಬೆಳೆದು ನಿಂತಿರುವ ಮರಗಳನ್ನು ಭಸ್ಮ ಮಾಡುವ ಶಕ್ತಿ ಇರುತ್ತದೆ. ಇದು ಕಾಡಿನ ಪುನರುತ್ಪತ್ತಿಗೂ ಮಾರಕ.

ಈ ಬೆಂಕಿಗೆ ನೆಲದ ಮೇಲೆ ಉದುರಿದ ಬೀಜಗಳು ಸುಟ್ಟು ಕರಕಲಾಗುತ್ತವೆ. ಅವುಗಳಿಗೆ ಭವಿಷ್ಯದಲ್ಲಿ ಜೀವ ತಳೆಯುವ ಶಕ್ತಿ ಇರುವುದಿಲ್ಲ. ಇದರ ಪರಿಣಾಮ ಸಸ್ಯಗಳು ಮತ್ತು ಮರಗಳ ಪುನರುತ್ಪತ್ತಿ ಪ್ರಕ್ರಿಯೆ ಕಣ್ಮರೆಯಾಗುತ್ತದೆ. ಸಣ್ಣ ಸಸ್ಯಗಳು ಪ್ರಖರ ಶಾಖ ತಾಳಲಾರದೆ ಅವಸಾನದ ಹಾದಿ ಹಿಡಿಯುತ್ತವೆ.

ಮಣ್ಣಿನ ಫಲವತ್ತತೆ ವೃದ್ಧಿಸುವಲ್ಲಿ ತರಗೆಲೆಗಳ ಪಾತ್ರ ದೊಡ್ಡದು. ಈ ಎಲೆಗಳು ಬೂದಿಯಾಗುವುದರಿಂದ ಮಣ್ಣಿನ ನೈಸರ್ಗಿಕ ಕೊಳೆಯುವಿಕೆ, ಫಲವತ್ತತೆ ಸಂಪೂರ್ಣವಾಗಿ ನಾಶವಾಗುತ್ತದೆ.

ಮಳೆಗಾಲದಲ್ಲಿ ಮಣ್ಣಿನ ಸವಕಳಿ ಉಂಟಾಗುತ್ತದೆ. ಓಡಿಹೋಗುವ ಮಳೆಯ ಹನಿಗಳಿಗೆ ತಡೆಯೊಡ್ಡುವ ಶಕ್ತಿಯನ್ನೂ ಮಣ್ಣು ಕಳೆದುಕೊಳ್ಳುತ್ತದೆ. ತೇವಾಂಶ ಹಿಡಿದಿಟ್ಟುಕೊಳ್ಳುವ ಸ್ವಭಾವವನ್ನೂ ಮರೆಯುತ್ತದೆ. ಇದು ನೈಸರ್ಗಿಕ ಅಸಮತೋಲನಕ್ಕೆ ಮುನ್ನುಡಿ ಬರೆಯುತ್ತದೆ. ಮತ್ತೊಂದೆಡೆ ನೀರಿನ ಮೂಲಗಳು ಬತ್ತಿಹೋಗುತ್ತವೆ. ಕುಡಿಯುವ ನೀರಿಗೆ ತತ್ವಾರ ಉಂಟಾಗಿ



ಬಂಡೀಪುರದ ಗಡಿ 212 ಕಿ.ಮೀ. ವ್ಯಾಪ್ತಿಯಷ್ಟಿದೆ. ಇದರ ಸುತ್ತಲೂ 50ಕ್ಕೂ ಹೆಚ್ಚು ಗಿರಿಜನರ ಹಾಡಿಗಳು, ಗ್ರಾಮಗಳು ಬರುತ್ತವೆ. ಇಲ್ಲಿನ ಜನರೊಂದಿಗೆ ಇಲಾಖೆಯ ಅಧಿಕಾರಿಗಳು ಹೊಂದಾಣಿಕೆ ಕಾಯ್ದುಕೊಳ್ಳಬೇಕು. ಬೆಂಕಿಯಿಂದ ಆಗುವ ಅನಾಹುತದ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕು. ಅಕ್ಟೋಬರ್, ನವೆಂಬರ್ ತಿಂಗಳಿಂದಲೇ ಬೆಂಕಿರೇಖೆಗಳನ್ನು ನಿರ್ಮಿಸಬೇಕು. ಅವುಗಳ ಸೂಕ್ತ ನಿರ್ವಹಣೆ ಮಾಡಬೇಕು. ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆಯಬೇಕು. ಪೂರ್ವ ಮುಂಗಾರು ಮಳೆಯನ್ನೇ ನೆಚ್ಚಿಕೊಂಡರೆ ಅನಾಹುತ ಕಟ್ಟಿಟ್ಟ ಬುತ್ತಿ.


-ಬಿ.ಬಿ. ಮಲ್ಲೇಶ

ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಹುಲಿ ಯೋಜನೆ ನಿರ್ದೇಶಕ, ಬಂಡೀಪುರ



ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು. ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ 9620444460

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.